ಕಲಾವಿದ ಸೀನು, ಚಿತ್ರದುರ್ಗ

*ಮದುವೆಯ ಮೊದಲ ಹಗಲಿಗಿಂತಲೂ ಮೊದಲ ರಾತ್ರಿಯ ಬಗ್ಗೆ ಕುತೂಹಲ ಜಾಸ್ತಿ, ಯಾಕೆ ಸರ್?*



ಕ್ಷಮಿಸಿ, ಕಾಂತ ಕಾಂತೆಯರ ಏಕಾಂತಕ್ಕೆ A ಸರ್ಟಿಫಿಕೇಟ್ ಇರುವುದರಿಂದ ಓಪನ್ ಆಗಿ ಉತ್ತರಿಸಲಾಗದು!

ಶಿಲ್ಪಿ ರಮೇಶ್, ಬನ್ನೂರು

*ರಾಮ್, ಪ್ರೇಮದ ಬಲೆಯಲ್ಲಿ ಬಿದ್ದವರಿಗೂ, ಬೆಂಕಿಯ ಬಲೆಯಲ್ಲಿ ಬಿದ್ದವರಿಗೂ ಏನು ವ್ಯತ್ಯಾಸ?*

ಅವರದು ಜೋಡಿ ರಾಗ, ಇವರದು ತೋಡಿ ರಾಗ!

ಪಿ.ಜೆ.ರಾಘವೇಂದ್ರ, ಮೈಸೂರು

*ಬ್ಲೂ ಟೂತ್ ಎಂದರೆ ಬ್ಲೂ ಫಿಲ್ಮ್ ಕಳಿಸುವ ಹಲ್ಲು ಎಂದರ್ಥವೇ?*

ನಿಜವೇ; ತಂತ್ರಜ್ಞಾನ ಹೆಚ್ಚಿದಷ್ಟೂ ಕುತಂತ್ರ, ಅಜ್ಞಾನ ಹೆಚ್ಚಿಸಿಕೊಳ್ಳುವುದು ನಮ್ಮ ವೈಶಿಷ್ಟ್ಯ..

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಕುಡುಕರಿಗೆ ಮಂತ್ರಿಪದವಿ ಕೊಡುವುದಾಗಿ ಸರ್ಕಾರ ಆದೇಶ ಹೊರಡಿಸಿದರೆ?*



ಈ ದೇಶದಲ್ಲಿ ಆ ಆದೇಶ ಅನವಶ್ಯ!

ಯು.ಪಿ. ಪುರಾಣಿಕ್, ಬೆಂಗಳೂರು

*ಗಂಡುಮಕ್ಕಳು ಮೈ ಮುಚ್ಚಿ ಓಡಾಡುತ್ತಾರೆ, ಆದರೆ ಹೆಣ್ಣುಮಕ್ಕಳು ಮೈ ಬಿಚ್ಚಿ ಓಡಾಡುತ್ತಾರೆ; ಗುಟ್ಟೇನು ಸಾರ್?*

ಗಂಡಿನದು ವಿಕ್ಷಿಪ್ತ ಮನಸ್ಸು, ನಮ್ಮದು ಬಿಚ್ಚುಮನಸ್ಸು ಎಂದಳಾ ಬೆಡಗಿ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಪೆನ್ ಮತ್ತು ಗನ್ ಇವುಗಳಲ್ಲಿಯ ವ್ಯತ್ಯಾಸವೇನು?*

ಗುಂಡಗೆ ಬರೆಯಲು ಪೆನ್, ಗುಂಡಿಗೆ ಕೊರೆಯಲು ಗನ್!

ಕುಬೇರಪ್ಪ ಎಂ.ವಿಭೂತಿ, ಹರಿಹರ

*ಹಣಕ್ಕಾಗಿ ದೇಹಸಿರಿಯನ್ನು ತೋರುವ ನಟಿಯರು ದೇಶಕ್ಕಾಗಿ ಯಾವ ತ್ಯಾಗ ಮಾಡಬಹುದು?*

ಹಣ ಕೊಟ್ಟು ದೇಹಸಿರಿಯನ್ನು ನೋಡಿ ಜೊಲ್ಲು ಸುರಿಸುವವರು ಮಾಡುವ ತ್ಯಾಗವನ್ನೇ!

ವಿ.ಹಮೀದ್, ವಿಟ್ಲ

*ಲವ್ ಫೇಲ್ಯೂರ್ ಆಗುವುದು ಹುಡುಗನಿಂದಲೋ, ಹುಡುಗಿಯಿಂದಲೋ?*

ಹುಡುಗಿಯ ಧಡಿಯ ಅಣ್ಣನಿಂದ!

ಆರೀಫ್, ದಾವಣಗೆರೆ

*ಅಪ್ಪಟ ಸನ್ಯಾಸಿಗಳ ಮನಸಲ್ಲೂ ಪ್ರೀತಿ, ಪ್ರೇಮದ ಭಾವನೆ ಚಿಗುರುವುದುಂಟಾ...?*

ಲವ್ ದೈ ನೈಬರ್ ಆ್ಯಸ್ ದೈ ಸೆಲ್ಫ್ ಎಂದವನು ಸನ್ಯಾಸಿಯೇ. ಪ್ರೇಮದ ಅರ್ಥ ಪ್ಯಾರ್‌ಗೇ ಆಗ್ಬಟ್ಟೈತೆ ಎನ್ನುವವರಿಗೆ ತಿಳಿಯದು ಬಿಡಿ!

ಬಿ.ಶ್ರೀನಾಥ, ಮೈಸೂರು

*ಪಾಪ, ಹೆಣ್ಣುಮಗುವಿನ ಅಪ್ಪ!* ಎನ್ನುತ್ತಾರಲ್ಲ, *ಏಕೆ?*

ಮುದ್ದುಮಗಳನ್ನು ಇಪ್ಪತ್ತು ವರ್ಷ ಸಾಕಿ ತನ್ನದಲ್ಲ ಎಂಬಂತೆ ಕಳುಹಿಸಬೇಕಲ್ಲಾ... ಅಪ್ಪನ ನೋವು ಅಪ್ಪನಿಗೇ ಗೊತ್ತು!

ಎನ್.ವಸಂತ, ಬೆಂಗಳೂರು

*ಸರ್ಕಾರಿ ಕಚೇರಿಗೆ ಬರೆದ ಪತ್ರ ಮತ್ತು ನಿಮ್ಮ ವಿಭಾಗಕ್ಕೆ ಪತ್ರ ಉತ್ತರ ಯಾರಿಂದ ಬೇಗ ಸ್ವಾಮಿ?*

ಪ್ರಶ್ನಿಸಿದ್ದು ಯುಕ್ತವಾಗಿದ್ದರೆ ಇಲ್ಲಿಂದ, ಲೋಕಾಯುಕ್ತವಾಗಿದ್ದರೆ ಅಲ್ಲಿಂದ!

ಎಂ.ಎನ್. ಸೋಮಶೇಖರ್, ಮೈಸೂರು

*ವರಿಸಿದ ಗೃಹಲಕ್ಷ್ಮಿಗೂ, ವ್ಯಾಲೆಂಟೈನ್ ಗರ್ಲ್‌ಫ್ರೆಂಡ್‌ಗೂ ಇರುವ ವ್ಯತ್ಯಾಸವೇನು?*

ಇವಳು ವರಿಸಿದವಳು, ಅವಳು ಆವರಿಸಿದವಳು!

ಬಿ.ಎಸ್.ಮಳ್ಳೂರ, ಹಲಗತ್ತಿ

*ಮಿಕ್ಸಿಗೂ, ಹೆಂಡತಿಗೂ ಏನು ವ್ಯತ್ಯಾಸ?*

ಮಿಕ್ಸಿ ಅಡಿಗೆಗೆ ಅವಶ್ಯ, ಹೆಂಡತಿ ಅಡಿಗಡಿಗೆ ಅವಶ್ಯ!

## ಬಹುಮಾನಿತ ಪ್ರಶ್ನೆ



ಹಾಡ್ಯ ಜಯಾನಂದ, ಮೈಸೂರು

*ಹಣೆಬರಹ ಮಾತೃಭಾಷೆಯಲ್ಲಿ ಇರುತ್ತದೋ, ರಾಷ್ಟ್ರಭಾಷೆಯಲ್ಲೋ...?*

ಅರ್ಥವಾಗದಂತೆ ಗೀಚಿರುವುದರಿಂದ – ಬಾಲಭಾಷೆ!

ಎಸ್. ಶೇಖರ್, ಹಾಸನ

*ಸಂಚಾರಿ ನ್ಯಾಯಪೀಠದ ಹಾಗೆ ಸಂಚಾರಿ ಧರ್ಮಪೀಠ ಸ್ಥಾಪನೆಯಾದರೆ ರಾಜ್ಯದಲ್ಲಿ ಧರ್ಮಸಂಸ್ಥಾಪನೆ ಆಗಬಹುದೆ?*

ಈಗ ಧರ್ಮ ಕೇವಲ ಹಾಳಾಗಿದೆ, ಆಗ ಧರ್ಮ ಬೀದೀಗ್ ಬೀಳತ್ತೆ!

ಎಚ್.ಆರ್. ದೇಸಾಯಿ, ರಾಯಚೂರು

*ಮನೆಯಲ್ಲಿದ್ದ ಅಜ್ಜ-ಅಜ್ಜಿ, ಕಾಕಾ-ಕಕ್ಕಿ, ಅಕ್ಕ-ಭಾವ, ದೊಡ್ಡಪ್ಪ-ದೊಡ್ಡಮ್ಮ, ಅಕ್ಕ-ತಂಗಿ, ಅಣ್ಣ-ತಮ್ಮ, ಮಾಮ-ಮಾಮಿ ಎಲ್ಲರೂ ಎಲ್ಲಿಗೆ ಹೋದರು?*

ಅಂಕಲ್–ಆಂಟಿ ಮನೆಗೆ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು

*ದೇವದೇವತೆಯರು ತಮ್ಮ ವಾಹನವಾಗಿ ಪ್ರಾಣಿ, ಪಕ್ಷಿಗಳನ್ನೇ ಆರಿಸಿಕೊಂಡಿದ್ದಾರಲ್ಲಾ, ಏಕೆ?*

ಇಷ್ಟೇ ಆಹಾರಕ್ಕೆ ಒಳ್ಳೇ ಮೈಲೇಜ್ ಕೊಡುತ್ತವಂತೆ!

ಸುನಿತ, ರಾಯಾಪುರ

*ಮೃತದೇಹವನ್ನು ದಾನ ಮಾಡುವುದರಿಂದ ವ್ಯಕ್ತಿಯ ಬದುಕಿಗೆ ಸಾರ್ಥಕತೆ ಇದೆಯೆ?*

ತಿಥಿ ಮಾಡಿ ಆತ್ಮಕ್ಕೆ ತೃಪ್ತಿ ನೀಡುವುದರ ಬದಲು ದಾನ ಮಾಡಿ ಆತ್ಮತೃಪ್ತಿ ಪಡೆಯುವುದು ಮಾನವೀಯ, ಶ್ರೇಷ್ಠ, ಸೂಕ್ತ!

ಅನಿತಾ ವಿ. ಜೋಷಿ, ಸತ್ತಾಪೂರ

*ಭೂಮಿಯನ್ನು ಮಾತ್ರ ಜಗತ್ತು ಎಂದು ಕರೆಯುತ್ತಾರೆಯೋ ಅಥವಾ ಎಲ್ಲಾ ಗ್ರಹಗಳನ್ನೂ ಸೇರಿಸಿ ಜಗತ್ತು ಎನ್ನುವರೋ?*

ಕುತ್ತು, ಮತ್ತು, ಸುತ್ತು, ಗತ್ತು ಇರುವುದೆಲ್ಲವೂ ಸೇರಿದರೆ ಜಗತ್ತು!

■ ರಾಮ್